



**ಹಲವು ಬಣ್ಣದ ಹಗ್ಗ**
**(ಹೊಸ ತಲೆಮಾರಿನ ಕಾವ್ಯ ಕುರಿತು)**
**ಲೇ: ಸುರೇಶ್ ನಾಗಲಮಡಿಕೆ**
**ಪು: 188 ಬೆ: ರೂ. 180**
**ಪ್ರ: ದೀಪಂಕರ ಪ್ರಕಾಶನ,**
**ನಂ. 58, 5ನೇ ಮುಖ್ಯರಸ್ತೆ,**
**ನರಸಿಂಹಲು ವಿಸ್ತರಣೆ,**
**ನಂದಿನಿ ಲೇಔಟ್,**
**ಬೆಂಗಳೂರು - 560 096**

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

ಪ್ರೀತಿ ಮತ್ತು ಜವಾಬ್ದಾರಿ. ಹೈಪೊಥಿಟಿಕಲ್ ಪ್ರಶ್ನೆಗಳಿಗೆ ಜಾಗವಿಲ್ಲ. ರಾಜಕೀಯ 'ಸರಿ'ಗಳಿಗೆ ಅವಕಾಶವಿಲ್ಲ. ಅಪೂರ್ಣ ಆಯ್ಕೆ, ಉಲ್ಲಂಘಿತ ಕ್ರಮಗಳ ಮೂಲಕ ಅಧ್ಯಯನ ಮುಕ್ತತೆಗೆ ಜಾಗವಿರಿಸಿಕೊಂಡಿದ್ದಾರೆ. ಅವರ ಮುಕ್ತ ನಿಲುವುಗಳನ್ನು ನಾವು ಪ್ರಶ್ನಿಸಬಹುದು. ಅದು ಅವರ ಅಪೇಕ್ಷೆ ಕೂಡ. ವಾಸ್ತವವಾಗಿ ಸಮಕಾಲೀನ ಕಾವ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವುದು ಯಾವಾಗಲೂ ಶ್ರಮದಾಯಕ ಕೆಲಸ. ಕೃತಿಗಳ ಲಭ್ಯತೆ ಸುಲಭವಲ್ಲ. ಚೆಲ್ಲಿ ಹೋಗುವ ಆಯ್ಕೆಗಳೇ ಅಧಿಕ. ಆ ಕುರಿತ ಆಕ್ಷೇಪಗಳನ್ನು ಎದುರಿಸಬೇಕು. ಒಟ್ಟಂದದಲ್ಲಿ ಈಗಿನ 'ಬಹುಮುಖಿ' ಕಾವ್ಯವನ್ನು ಗ್ರಹಿಸುವುದು, ಅದಕ್ಕೊಂದು ಸ್ವರೂಪ ತರುವುದು ಕಷ್ಟ. ನಿರ್ದಿಷ್ಟ ಮಾನದಂಡಗಳಿಲ್ಲ. ಇಂತಲ್ಲಿ ಸುರೇಶ ನಾಗಲಮಡಿಕೆ ಧೈರ್ಯವಾಗಿ ಹೆಜ್ಜೆಯಿರಿಸಿದ್ದಾರೆ.

ಸ್ಥೂಲವಾಗಿ ಅವರ ಅಧ್ಯಯನದ ರೀತಿಯನ್ನು ಹೀಗೆ ಗ್ರಹಿಸಬಹುದು.

- ಕುಪಿತಗೊಂಡ ಸಾಮಾಜಿಕ ಸಂದರ್ಭದಲ್ಲಿ ವ್ಯಾಖ್ಯಾನ – ಅಪವ್ಯಾಖ್ಯಾನಗಳ ದ್ವಂದ್ವ.
- ಕಾವ್ಯತತ್ತ್ವ – ತಾತ್ವಿಕತೆಗಳ ಸ್ಪಷ್ಟ ಗ್ರಹಿಕೆಯ ಮೂಲಕ ಜೀವನ ದರ್ಶನ ಸ್ಥಾಪಿಸಿಕೊಳ್ಳುವ ಸವಾಲು.
- ದೇಸೀ ಚಿಂತನೆಗಳ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣ.
- ಬದಲಾಗುತ್ತಿರುವ ದಲಿತ ಕಾವ್ಯ ಮತ್ತು ಹೆಣ್ಣು ಕವಿತೆ (ಮಹಿಳಾಕಾವ್ಯ).
- ನಿಲುವು ಮತ್ತು ಕಾವ್ಯ ನೇಯ್ಗೆಯಲ್ಲಿ ಸ್ವಂತಿಕೆಯ ಸವಾಲು.

ಹೊಸ ಕಾವ್ಯವು ಇದನ್ನು ಹೇಗೆ ಎದುರಿಸಿದೆ ಎಂಬುದನ್ನು ಒಟ್ಟಾಗಿ ಮತ್ತು ಬಿಡಿಬಿಡಿಯಾಗಿ ಇದರಲ್ಲಿ ಚರ್ಚಿಸಿದ್ದಾರೆ. ಹೊಸಬರ ಕಾವ್ಯಕ್ಕೆ ಸಮಾಜ ಮತ್ತು ಮನುಷ್ಯನೇ ಕೇಂದ್ರ ಎಂದು ಸುರೇಶರು ಭಾವಿಸಿದ್ದಾರೆ. ವೈವಿಧ್ಯಮಯ